**ಸಿವಿಲ್ ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ,**

**ಹಗರಿಬೊಮ್ಮನಹಳ್ಳಿ**

ಓ ಎಸ್ ನಂ. 149/2017

ಸಾಕ್ಷಿಗೆ ದಿನಾಂಕ 22-10-2024 ರಂದು ಪ್ರಮಾಣ ವಚನ ಭೋದಿಸಲಾಯಿತು.

P.W.: 3

| | | |
|---|---|---|
| ಹೆಸರು | ಃ | ಎಸ್ ಹಾಲೇಶ |
| ತಂದೆಯ ಹೆಸರು | ಃ | ಎಸ್ ರಾಮಣ್ಣ |
| ವಯಸ್ಸು | ಃ | 67 ವರ್ಷ |
| ಉದ್ಯೋಗ | ಃ | ಪತ್ರ ಬರಹಗಾರರು |
| ವಾಸ ಸ್ಥಳ | ಃ | ಹೆಚ್ ಬಿ ಹಳ್ಳಿ |

ಮುಖ್ಯ ವಿಚಾರಣೆಃ ವಾದಿ ಪರ ಶ್ರೀ ಎಸ್ ಎನ್ ವಕೀಲರಿಂದಃ-

ನಾನು ಸನ್ 1983 ರಿಂದ ಹೆಚ್ ಬಿ ಹಳ್ಳಿಯಲ್ಲಿ ಪತ್ರ ಬರಹಗಾರರು ಅಂತಾ ಕೆಲಸ ನಿರ್ವಹಿಸುತ್ತಿದ್ದೇನೆ.

ಬೆಟಗೇರಿ ಬಸಪ್ಪ ಇವರು ದಿಃ 16-10-2008 ರಂದು ವಿಲ್ ನಾಮವನ್ನು ಬರೆಸಿರುತ್ತಾರೆ. ಸದರಿ ಬಸಪ್ಪ ಇವರ ಹೇಳಿಕೆಯಂತೆ ಸದರಿ ವಿಲ್ ನಾಮವನ್ನು ಬೆರಳಚ್ಚು ಮಾಡಿರುತ್ತೇನೆ. ಸದರಿ ದಾಖಲೆಯನ್ನು ನೋಡಿದರೆ ನಾನು ಗುರುತಿಸುತ್ತೇನೆ. ಸಾಕ್ಷಿಯು ಸದರಿ ದಾಖಲೆಯನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-2 ಅಂತಾ ಗುರುತಿಸಲಾಗಿದೆ. ಸಾಕ್ಷಿಯು ಸದರಿ ದಾಖಲೆಯ ಮೇಲೆ ತನ್ನ ಸಹಿ ಮತ್ತು ಮೊಹರು ಇದೆ ಅಂತಾ ನೋಡಿ ಗುರುತಿಸಿದ್ದು ಅದನ್ನು ನಿಪಿ-2ಎ ಎಂದು ಗುರುತಿಸಲಾಯಿತು. ಸದರಿ ದಾಖಲೆಯ ಸಂಪೂರ್ಣ ವಿಚಾರವನ್ನು ಬೆಟಗೇರಿ ಬಸಪ್ಪ ಇವರು ಹೇಳಿ ಬರೆಸಿರುತ್ತಾರೆ. ಸದರಿ ದಾಖಲೆಯನ್ನು ಬರೆದಾದ ಮೇಲೆ ನಾನು ಅವರಿಗೆ ಓದಿ ಹೇಳಿರುತ್ತೇನೆ. ನಂತರ ಅದಕ್ಕೆ ಅವರು ಸರಿ ಇದೆ ಅಂತಾ ಒಪ್ಪಿಕೊಂಡು ಸಹಿ ಮಾಡಿರುತ್ತಾರೆ. ಸದರಿ ದಾಖಲೆಗೆ ಸಾಕ್ಷಿದಾರರು ಸಹಿ ಮಾಡಿರುತ್ತಾರೆ ಮತ್ತು ನಾನು ಬಿಕ್ಕಲಂ ಅಂತಾ ಸಹಿ ಮಾಡಿರುತ್ತೇನೆ. ಸದರಿ ದಾಖಲೆ ನಂತರದಲ್ಲಿ ಉಪ ನೊಂದಣಿ ಕಚೇರಿಯಲ್ಲಿ ನೊಂದಣಿಯಾಗಿರುತ್ತದೆ.

(ಪ್ರತಿವಾದಿ ಪರ ವಕೀಲರು ಪಾಟೀಸವಾಲಿಗೆ ಸಮಯಾವಕಾಶ ಕೋರಿದ್ದು ನೀಡಲಾಯಿತು.)

(ಮುಕ್ತ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ,

ಸಿವಿಲ್ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ